(ಇಂದು ದಿನಾಂಕಃ 24-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು ಶ್ರೀ ಕೆ. ಆರ್ ಎದುರುದಾರ ಪರ ವಕೀಲರಿಂದಃ**

1. 2ನೇ ವಾದಿ ಹಾಗೂ ನನ್ನ ತಾಯಿ ಕಲಬುರಗಿ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಸಲ್ಲಿಸಿರುವ ದಾವೆಯು ಸಾಯಪ್ಪ ಮತ್ತು ಅರ್ಜಿದಾರರಿಗೆ ಯಾವುದೇ ಸಂಬಂದ ಇಲ್ಲ ಎಂದು ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆಯ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ದಾವೆಯಲ್ಲಿ ಎನು ಆದೇಶ ಆಗಿದೆ ಎಂದು ತಿಳಿದುಕೊಂಡು ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದಾವೆ ವಜಾ ಆದ ನಂತರ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಸೇರಿ ಪ್ರತಿವಾದಿ 1 ರಿಂದ 5 ರವರ ವಿರುದ್ದ ಜೀವನಾಂಶ ಕೋರಿ ಬೇರೆ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುವುದಿಲ್ಲ. ನನ್ನ ದಾವೆಯ ಪುಟ ಸಂಖ್ಯೆ.8 ರ ಕೊನೆಯ ಖಂಡಿಕೆಯಲ್ಲಿ ಸಾಯಪ್ಪ ತೀರಿಕೊಂಡ ನಂತರ ಪ್ರತಿವಾದಿ 1 ರಿಂದ 5 ರವರು ನಮ್ಮನ್ನೂ ನಿರ್ಲಕ್ಷಿಸಿದ್ದರಿಂದ ವಾದಿ 1 ರಿಂದ 3 ರವರು ಜೀವನಾಂಶ ಕೋರಿ ಅವರ ವಿರುದ್ಧ ಕಲಬುರಗಿ ನ್ಯಾಯಾಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದು ಬರೆದಿರುವ ವಿಷಯ ಸರಿ ಇರುತ್ತದೆ. ವಾದಿ 1 ರಿಂದ 3 ರವರು ಜೀವನಾಂಶ ಕೋರಿ ಪ್ರತಿವಾದಿಯ ವಿರುದ್ಧ ಕಲಬುರಗಿ ನ್ಯಾಯಾಯದಲ್ಲಿ ಯಾವ ವರ್ಷದಲ್ಲಿ ಹಾಕಿದ್ದೇವು ಎಂದು ನನಗೆ ಗೊತ್ತಿಲ್ಲ ಮತ್ತು ಆ ದಾವೆ ಯಾವಾಗ ವಜಾ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ದಾವೆಯ ಪುಟ ಸಂಖ್ಯೆ.8 ರ ಕೊನೆಯ ಖಂಡಿಕೆಯಲ್ಲಿ ಸಾಯಪ್ಪ ತೀರಿಕೊಂಡ ನಂತರ ಪ್ರತಿವಾದಿ 1 ರಿಂದ 5 ರವರು ನಮ್ಮನ್ನೂ ನಿರ್ಲಕ್ಷಿಸಿದ್ದರಿಂದ ವಾದಿ 1 ರಿಂದ 3 ರವರು ಜೀವನಾಂಶ ಕೋರಿ ಅವರ ವಿರುದ್ಧ ಕಲಬುರಗಿ ನ್ಯಾಯಾಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದು ಬರೆದಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಾವೆಯಲ್ಲಿ ನಾನು ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ತಂಗಿ ಮತ್ತು ತಾಯಿ ಸಲ್ಲಿಸಿರುವ ದಾವೆ ಮತ್ತು ನಾನು ಸಲ್ಲಿಸಿರುವ ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆಯನ್ನು ಪ್ರತಿವಾದಿ 1 ರಿಂದ 5 ರವರ ವಿರುದ್ಧ ಸಲ್ಲಿಸಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಿರಾ? ಎಂದರೆ ಸಾಕ್ಷಿ ನಾನು ಆ ದಾವೆಯ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಪತ್ರದ ಪುಟ ಸಂಖ್ಯೆ.8 ಕೊನೆಯ

ಕಂಡಿಯಲ್ಲಿರುವ ವಿಷಯ ಎಲ್ಲಾ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಕಲಬುರಗಿ ನ್ಯಾಯಾಲಯದ ದಾವೆ ವಜಾ ಆದ ನಂತರ ಈ ದಾವೆಯನ್ನು ಸಲ್ಲಿಸುವ ಮೊದಲು ನಾನು ಬೇರೆಯಾವ ದಾವೆಯನ್ನು ಪ್ರತಿವಾದಿ 1 ರಿಂದ 5 ರವರ ವಿರುದ್ಧ ಸಲ್ಲಿಸಿರುತ್ತಿರಾ? ಎಂದರೆ ಸಾಕ್ಷಿ ಅವರು ಹಾಕಿದ್ದರು ಏನಾಗಿದೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

2. ನನ್ನ ಮತ್ತು ನನ್ನ ತಂಗಿಯ ಶಾಲಾ ದಾಖಲಾತಿಗಳನ್ನು ಕಲಬುರಗಿ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ಏಕೆ ಸಲ್ಲಿಸಿಲ್ಲ ಎಂದು ನನಗೆ ಗೊತ್ತಿಲ್ಲ. ಕಲಬುರಗಿ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ನನ್ನ ತಾಯಿ, ಎರಡನೇ ವಾದಿ ಅಂದರೆ ನನ್ನ ತಂಗಿ ಶಾಲೆ ಕಲಿತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಲಬುರಗಿ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ನನ್ನ ತಾಯಿಯ ಸಾಕ್ಷದ ಪ್ರತಿಯನ್ನು ಈ ದಾವೆಯಲ್ಲಿ ನಾನು ಸಲ್ಲಿಸಿರುತ್ತೇನೆ. ಅದು ನಿ.ಪಿ-11 ಇರುತ್ತದೆ ಎಂದರೆ ಸರಿ. ನನಗೆ ಕನ್ನಡ ಓದಲು ಬರುತ್ತದೆ. ನಿ.ಪಿ-11ನ್ನು ನಾನು ಓದಿ ತಿಳಿದುಕೊಂಡು ಸಲ್ಲಿಸಿರುತ್ತೇನೆ. ನಿ.ಪಿ-11ರಲ್ಲಿ ಪುಟ ಸಂಖ್ಯೆ3 ರ ಎರಡನೇ ಕಂಡಿಕೆಯಲ್ಲಿ ನನ್ನ ತಾಯಿ ಎರಡನೇ ವಾದಿ ಅಂದರೆ ನನ್ನ ತಂಗಿ ಶಾಲೆ ಕಲಿತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ತಂಗಿ ಶಾಲೆ ಕಲಿತಿಲ್ಲ ಆದ್ದರಿಂದ ಕಲಬುರಗಿ ನ್ಯಾಯಾಲಯದಲ್ಲಿ ನಮ್ಮ ಶಾಲೆಯ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಹಾಕಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ನನ್ನ ತಂಗಿಯ ಶಾಲಾ ದಾಖಲಾತಿಗಳನ್ನು ಈ ದಾವೆಯ ಸಲುವಾಗಿ ಖೊಟ್ಟಿ ತಯಾರಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.